ಓಎಸ್ 233/2021

ಡಿಡಬ್ಲ್ಯೂ 1

**ಸಾಕ್ಷಿಯು ದಿಃ 23.03.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಂದುವರೆದ ಮುಖ್ಯ ವಿಚಾರಣೆ: 1ನೇ ಪ್ರತಿವಾದಿ ಪರ ವಕೀಲರಿಂದ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ</u>**

ಮುಂದುವರೆದ ಮುಖ್ಯ ವಿಚಾರಣೆಯ ಭಾಗವಾಗಿ ದಿನಾಂಕ 29.03.1961ರ ಕ್ರಯಪತ್ರವನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ 7 ಎಂದು, ದಿನಾಂಕ 13.04.2007ರ ಕ್ರಯಪತ್ರದ ಇ-ದೃಢಿಕೃತ ಪ್ರತಿಯನ್ನು ಹಾಜರುಪಡಿಸಿರುತ್ತೇನೆ ಅದನ್ನು ನಿಡಿ 8 ಎಂದು ಗುರ್ತಿಸಲಾಯಿತು.

**<u>ಪಾಟೀ ಸವಾಲು: ವಾದಿ ಪರ ವಕೀಲರಿಂದ</u>**

ನಿಡಿ 8 ಕ್ರಯಪತ್ರದ ಮಾರಾಟಗಾರರು ರುದ್ರಪ್ಪ ರವರ ಕುಟುಂಬದ ಸಧಸ್ಯರು ಎಂದರೆ ಸರಿ. ಸದರಿ ಮಾರಾಟಗಾರರು ರುದ್ರಪ್ಪ ಮತ್ತು ದೇವಿರಮ್ಮ ರವರ ಮಕ್ಕಳು ಎಂದರೆ ಸರಿ. ನಿಡಿ 8 ಕ್ರಯಪತ್ರದಂತೆ ದಿನಾಂಕ 13.04.2007 ರಂದು ಸರ್ವೇ ನಂಬರ್ 59ರ 5 ಎಕರೆ 37 ಗುಂಟೆ ಪೈಕಿ 2 ಎಕರೆ 37 ½ ಆಸ್ತಿಯನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯಪತ್ರದ ಆಸ್ತಿಯನ್ನು ದೇವಿರಮ್ಮ ರವರಿಗೆ ನನ್ನ ತಂದೆ ಚಂದ್ರಪ್ಪ ರವರು ನೋಂದಾಯಿತ ದಾನ ಪತ್ರದ ಮೂಲಕ ದಿನಾಂಕ 06.04.1961 ರಂದು ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಹೆಣ್ಣುಮಕ್ಕಳಿಗೆಂದು ನೀಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರದಂತೆ ಹೆಣ್ಣು ಮಕ್ಕಳಿಗೆ ನೀಡಿಲ್ಲ, ದೇವಿರಮ್ಮ ರವರಿಗೆ ಮಾತ್ರ ಆಸ್ತಿಯನ್ನು ದಾನ ಮಾಡಲಾಗಿದೆ ಎಂದರೆ ಸಾಕ್ಷಿಯು ದೇವಿರಮ್ಮ ಮತ್ತು ಪಾರ್ವತಮ್ಮ ಇಬ್ಬರಿಗೂ ನೀಡಲಾಗಿದ್ದು, ದೇವಿರಮ್ಮ ದೊಡ್ಡವರಾದ ಕಾರಣ ಅವರ ಹೆಸರಿನಲ್ಲಿ ನೀಡಲಾಗಿದೆ ಎಂದು ನುಡಿಯುತ್ತಾರೆ. ಸದರಿ ದಾನಪತ್ರವಾಗುವ ಕಾಲಕ್ಕೆ ಪಾರ್ವತಮ್ಮ ರವರಿಗೆ 18 ವರ್ಷ ವಯಸ್ಸಾಗಿರಲಿಲ್ಲ ಎಂದರೆ

ಸರಿಯಲ್ಲ. ನಿಪಿ 12 ದಾನಪತ್ರದಲ್ಲಿ ನಮೂದಾಗಿರುವ ಆಸ್ತಿ ಚಂದ್ರಪ್ಪ ರವರ ಪಿತ್ರಾರ್ಜಿತ ಆಸ್ತಿ ಆಗಿದ್ದು ಆ ಪೈಕಿ 2 ಎಕರೆ 37 ½ ಗುಂಟೆಯನ್ನು ದೇವಿರಮ್ಮ ರವರಿಗೆ ದಾನ ಮಾಡಿದ್ದಾರೆ ಎಂದರೆ ಸಾಕ್ಷಿಯು ದೇವಿರಮ್ಮ ಮತ್ತು ಪಾರ್ವತಮ್ಮ ಇಬ್ಬರಿಗೆ ಸೇರಿ ದಾನ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದೇವಿರಮ್ಮ ರವರಿಗೆ ದಾನಪತ್ರದ ಮೂಲಕ ಬಂದ ಆಸ್ತಿಯನ್ನು ದೇವಿರಮ್ಮ ರವರ ಮಕ್ಕಳು ಅಬ್ದುಲ್ ಜಪಾರ್ ರವರ ಮಗನಾದ ಮುಬಾರಕ್ ಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಸರ್ವೇ ನಂಬರ್ 59 ರಲ್ಲಿ ದಾನ ಮಾಡಿ ಇನ್ನೂ 2 ಎಕರೆ 37 ½ ಗುಂಟೆ ಜಮೀನು ನನ್ನ ತಂದೆಗೆ ಉಳಿದಿರುತ್ತದೆ ಎಂದರೆ ಸರಿ. ಸದರಿ ಉಳಿಕೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆ ಸರ್ಕಾರಿ ಬಂಜರು, ಪಶ್ಚಿಮಕ್ಕೆ ಸರ್ವೇ ನಂಬರ್ 61ರ ಜಮೀನು, ಉತ್ತರಕ್ಕೆ ಸರ್ವೇ ನಂಬರ್ 60ರ ನಮಗೆ ಸೇರಿದ ಜಮೀನು, ದಕ್ಷಿಣಕ್ಕೆ ಸರ್ಕಾರಿ ಬಂಜರು ಇರುತ್ತದೆ ಎಂದರೆ ಸಾಕ್ಷಿಯು ತಿರುಗಾಡುವ ಓಣಿ ಇದೆ ಎಂದು ನುಡಿಯುತ್ತಾರೆ.

2. ದಾವ ಐಟಂ ನಂಃ 2ನೇ ಸ್ವತ್ತು ನನ್ನ ತಂದೆ ಚಂದ್ರಪ್ಪ ರವರ ಪಿತ್ರಾರ್ಜಿತ ಆಸ್ತಿ ಸ್ವತ್ತಾಗಿರುವುದರಿಂದ ವಾದಿ ಮತ್ತು ಪ್ರತಿವಾದಿಗಳಾದ ನಮ್ಮೆಲ್ಲರಿಗೂ ಅದರ ಮೇಲೆ ಹಕ್ಕು ಇದೆ ಎಂದರೆ ಸಾಕ್ಷಿಯು ಸದರಿ ಜಮೀನನ್ನು ಲಿಂಗಮ್ಮ ಎಂಬುವವರು ಸಿದ್ದಪ್ಪ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಮತ್ತು ಆ ಆಸ್ತಿ ನಮ್ಮ ಕುಟುಂಬದಲ್ಲಿ ಇಲ್ಲ, ನಂತರ ಸದರಿ ಆಸ್ತಿಯನ್ನು ಸಿದ್ದಪ್ಪ ಬಿನ್ ಬಸಪ್ಪ ರವರಿಂದ ನಾನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ದಾವ ಐಟಂ ನಂಃ 2ನೇ ಸ್ವತ್ತನ್ನು ಸಿದ್ದಪ್ಪ ರವರಿಗೆ ನನ್ನ ತಂದೆ ಭೋಗ್ಯ ಪತ್ರದ ಮೂಲಕ ನೀಡಿದ್ದು ಅದರ ಖಾತೆ ಸಿದ್ದಪ್ಪ ರವರ ಹೆಸರಿಗೆ ವರ್ಗಾವಣೆಯಾಗಿದ್ದು, ನಂತರದಲ್ಲಿ ನಾನು ಸದರಿ ಆಸ್ತಿಯ ಖಾತೆ ಸಿದ್ದಪ್ಪ ರವರ ಹೆಸರಿನಲ್ಲಿದ್ದ ಕಾರಣ ಹಾಗೂ ನಾನು ಕುಟುಂಬದ ಹಿರಿಯನಾದ ಕಾರಣ ನನ್ನ ಹೆಸರಿಗೆ ಕ್ರಯಪತ್ರ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಕುಟುಂಬದ ಹಿರಿಯನಲ್ಲ, ನನ್ನ ಅಣ್ಣ ಸೋಮಪ್ಪ ಕುಟುಂಬದ ಹಿರಿಯ ಮತ್ತು ದಾವ ಐಟಂ ನಂಃ 2ನೇ ಸ್ವತ್ತನ್ನು ಸಿದ್ದಪ್ಪ ರವರಿಗೆ ಮಾರಾಟ ಮಾಡಲಾಗಿತ್ತು ಹಾಗೂ ಅದನ್ನು ನಾನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬದ ಜವಾಬ್ದಾರಿಯನ್ನು ನಾನೇ ವಹಿಸಿಕೊಂಡಿದ್ದೆ

ಎಂದರೆ ಸಾಕ್ಷಿಯು ಇಲ್ಲ ನಾನು ಹೊರಗಡೆ ಇದ್ದೆ ಎಂದು ನುಡಿಯುತ್ತಾರೆ. ನಿಡಿ 7 ದಾಖಲೆಯನ್ನು ಕೇಸಿಗೋಸ್ಕರ ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ